ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**233**
2	ಸದಸ್ಯರ ಹೆಸರು	:	**ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು)**
3	ಉತ್ತರಿಸುವ ದಿನಾಂಕ	:	**17.02.2022**
4	ಉತ್ತರಿಸುವ ಸಚಿವರು	:	**ಗೃಹ ಸಚಿವರು**

ಪ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅಡಿಷನಲ್ ಎಸ್.ಪಿ. ಹುದ್ದೆಗಳ ಸಂಖ್ಯೆ: ಎಷ್ಟು; ಸದರಿ ಹುದ್ದೆಗಳಲ್ಲಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಯಿಂದ ಮುಂಬಡ್ತಿ ಹೊಂದಿದವರ ಸಂಖ್ಯೆ ಎಷ್ಟು;	ಎಸ್.ಪಿ. (ಸಿವಿಲ್) (ನಾನ್ ಐಪಿಎಸ್) ಹುದ್ದೆಗಳ ಸಂಖ್ಯೆ: 109, ಸದರಿ ಹುದ್ದೆಗಳಲ್ಲಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯಿಂದ ಮುಂಬಡ್ತಿ ಹೊಂದಿರುವವರ ಸಂಖ್ಯೆ: 34
ಆ)	ಇನ್ಸ್‌ಪೆಕ್ಟರ್ ಹುದ್ದೆಯಿಂದ ಡಿ.ಎಸ್.ಪಿ. ಹುದ್ದೆಗೆ ಕ.ಸ.ಸೇ. ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ ಮೀಸಲಾತಿ (ರೋಷ್ಟರ್) ನಿಯಮಗಳನ್ನು ಪಾಲಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;	ಕ.ನಾ.ಸೇ. ನಿಯಮ 32 ರಡಿ ಮಾಡಲಾಗುವ ಸ್ವತಂತ್ರ ಪ್ರಭಾರ ವ್ಯವಸ್ಥೆಯು ತಾತ್ಕಾಲಿಕ ವ್ಯವಸ್ಥೆಯಾಗಿದ್ದು ಹಾಗೂ ಸ್ವತಂತ್ರ ಪ್ರಭಾರದಲ್ಲಿರಿಸಿರುವ ಆದೇಶವನ್ನು ಯಾವುದೇ ಸಂದರ್ಭದಲ್ಲಾದರೂ ಹಿಂದಕ್ಕೆ ಪಡೆಯಲು ಆಸ್ಪದವಿರುವುದರಿಂದ ಮೀಸಲಾತಿ ನಿಯಮಗಳನ್ನು ನಿಯಮಾನುಸಾರ ಪಾಲಿಸಲಾಗುತ್ತಿದೆ.
ಇ)	ಪ್ರಸ್ತುತ ಡಿ.ಎಸ್.ಪಿ. ಹುದ್ದೆಯ ವೃಂದ ಬಲ ಎಷ್ಟು; ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹುದ್ದೆಗಳ ಸಂಖ್ಯೆ ಎಷ್ಟು; ನಿಯಮಾನುಸಾರ ಡಿ.ಎಸ್.ಪಿ. ಹುದ್ದೆಯ ಒಟ್ಟು ವೃಂದ ಬಲದ ಶೇ. 15ರಷ್ಟು ಪರಿಶಿಷ್ಟ ಜಾತಿಯವರಿಗೆ ಹಾಗೂ ಶೇ. 3ರಷ್ಟು ಪರಿಶಿಷ್ಟ ಪಂಗಡದವರಿಗೆ ಪ್ರಾತಿನಿಧ್ಯ ನೀಡಲಾಗಿದೆಯೇ;	ಪ್ರಸ್ತುತ ಡಿವೈಎಸ್‌ಪಿ (ಸಿವಿಲ್) ವೃಂದ ಬಲ 419 ಇರುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹುದ್ದೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 21 ಎಸ್‌ಬಿಸಿ 1997, ದಿನಾಂಕ: 03-02-1999 ಮತ್ತು ದಿನಾಂಕ: 13-04-1999 ರಲ್ಲಿನ ನಿರ್ದೇಶನದನ್ವಯ ಪರಿಶಿಷ್ಟ ಜಾತಿ ಶೇ. 15 ರಷ್ಟು ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ. 3 ರಷ್ಟು ಪ್ರಾತಿನಿಧ್ಯವನ್ನು ನೀಡಲಾಗಿರುತ್ತದೆ.
ಈ)	ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ಕ.ಸ.ಸೇ. ನಿಯಮ 32ರಡಿ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ ವಿವಿಧ ಇಲಾಖೆಯಲ್ಲಿ ಮೀಸಲಾತಿ (ರೋಷ್ಟರ್) ನಿಯಮಗಳನ್ನು ಪಾಲಿಸಿರುವಂತೆ, ಪೊಲೀಸ್ ಇಲಾಖೆಯಲ್ಲಿ ಪಾಲಿಸದಿರಲು ಕಾರಣವೇನು?	ಪೊಲೀಸ್ ಇಲಾಖೆಯಲ್ಲಿ ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ಕ.ನಾ.ಸೇ. ನಿಯಮ 32 ರಡಿ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ ರೋಸ್ಟರ್ ನಿಯಮಗಳನ್ನು ಪಾಲಿಸದಿರುವ ಬಗ್ಗೆ ತಕ್ಷಣವೇ ಪರಿಶೀಲಿಸಲಾಗುವುದು.

ಸಂಖ್ಯೆ: ಒಇ 46 ಪಿಇಜಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ

ಕ್ರ ಸಂ	ವಿವರಗಳು	ಕಾರ್ಯನಿರತ ಬಲ (ಹೈ-ಕಯೇತರ)				ಕಾರ್ಯನಿರತ ಬಲ (ಹೈ-ಕ)			
		ಎಸ್‌ಸಿ	ಎಸ್‌ಟಿ	ಇತರ	ಒಟ್ಟು	ಎಸ್‌ಸಿ	ಎಸ್‌ಟಿ	ಇತರೆ	ಒಟ್ಟು
1.	ಮಂಜೂರಾತಿ ಬಲ				359				60
2.	ನೇರ ನೇಮಕಾತಿ (ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ತರಬೇತಿಯಲ್ಲಿರುವ)	07	01	39	47	02	01	04	07
3.	ಕರ್ತವ್ಯ ನಿರ್ವಹಿಸುತ್ತಿರುವ ಕ್ರಮಬದ್ಧ ಹೊಂದಿದ ಡಿವೈಎಸ್‌ಪಿ	41	08	210	259	09	06	32	47
4.	ಒಟ್ಟು	48	09	249	306	11	07	36	54
5.	ಶೇಕಡವಾರು	15.68%	2.94%			20.37%	12.96%		